ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE: 12/3/2020

# ಅವಾಚ್ಯ ಪದ ಬಳಕೆಯಿಂದ ಹಕ್ಕುಚ್ಯುತಿ

'ಮಾಜಿ ಸ್ಪೀಕರ್ ರಮೇಶ್ ಕುಮಾರ್ ನನ್ನ ವಿರುದ್ಧ ಬಾಸ್ಟರ್ಡ್ ಎಂದು ಅಶ್ಲೀಲ ಪದ ಬಳಕೆ ಮಾಡಿದ್ದು, ಇದರಿಂದ ನನ್ನ ಶಾಸಕ ಸ್ಥಾನದ ಹಕ್ಕು ಚ್ಯುತಿಯಾಗಿದೆ' ಎಂದು ವೈದ್ಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಬುಧವಾರ ಹಕ್ಕುಚ್ಯುತಿ ನಿರ್ಣಯ ಮಂಡಿಸಿದ್ದಾರೆ.

ಈ ನಿರ್ಣಯಕ್ಕೆ ಡಿಸಿಎಂ ಡಾ.ಅಶ್ವತ್ಥನಾರಾಯಣ, ಸಚಿವರಾದ ವಿ.ಸೋಮಣ್ಣ, ರಮೇಶ್ ಜಾರಕಿಹೊಳಿ, ಆನಂದ್‌ಸಿಂಗ್, ಬಸವರಾಜ್ ಬೊಮ್ಮಾಯಿ, ಮುಖ್ಯ ಸಚೇತಕ ವಿ.ಸುನೀಲ್ ಕುಮಾರ್ ಸಹಿ ಹಾಕಿದ್ದಾರೆ. ಈ ನಿರ್ಣಯದಲ್ಲೂ ರಮೇಶ್ ಕುಮಾರ್‌ನ್ನು ವಿಧಾನಸಭೆ ಕಲಾಪ ಮುಕ್ತಾಯವಾಗುವವರೆಗೆ ಅಮಾನತುಗೊಳಿಸುವಂತೆ ಒತ್ತಾಯಿಸಲಾಗಿದೆ.

**ದಾಖಲೆಗೆ ಹೋಗದ ಅವಾಚ್ಯ ನಿಂದನೆ?**

ಸಚಿವ ಸುಧಾಕರ್ ವಿರುದ್ಧ ರಮೇಶ್ ಕುಮಾರ್ ಬಳಸಿರುವ ಅವಾಚ್ಯ ಪದಗಳು ವಿಧಾನಸಭೆಯ ದಾಖಲೆಗೆ ಸೇರಿಲ್ಲ ಎಂದು ಹೇಳಲಾಗುತ್ತಿದೆ. ಹೀಗಾಗಿ ಹಕ್ಕು ಚ್ಯುತಿ ನಿರ್ಣಯವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸಬೇಕಾದ ಸಾಕ್ಷ್ಯಗಳಿಗಾಗಿ ಈಗ ಸ್ಪೀಕರ್ ಕಚೇರಿ ಪರದಾಡುವಂತಾಗಿದೆ.

ಬಾವಿಯಲ್ಲಿ ನಿಂತು ಮಾತನಾಡುವುದು ದಾಖಲೆಗೆ ಹೋಗಬಾರದು ಎಂದು ವಿಧಾನಸಭೆ ವರದಿಗಾರರಿಗೆ ಸ್ಪಷ್ಟ ನಿರ್ದೇಶನವನ್ನು ನೀಡಲಾಗಿದೆ. ಹೀಗಾಗಿ ಸಹಜವಾಗಿಯೇ ಇಂಥ ಪದಗಳನ್ನು ಅವರು ದಾಖಲೆಗೆ ಸೇರಿಸಿಲ್ಲ. ಇನ್ನು ಕಲಾಪದ ನೇರ ಪ್ರಸಾರ ಮಾಡುವ ಚಂದನ ವಾಹಿನಿ ಸ್ಪೀಕರ್ ಹಾಗೂ ಆಡಳಿತ ಪಕ್ಷದತ್ತ ಗಮನ ಹರಿಸುವುದು ಹೆಚ್ಚಾದ್ದರಿಂದ ರಮೇಶ್ ಕುಮಾರ್ ಮಾತುಗಳು ರೆಕಾರ್ಡ್ ಆಗಿಲ್ಲ ಎಂದು ಹೇಳಲಾಗುತ್ತಿದೆ. ಹೀಗಾಗಿ ಸುಧಾಕರ್ ನೀಡಿರುವ ನೋಟಿಸ್‌ನಲ್ಲಿ ಡಿಸಿಎಂ ಅಶ್ವತ್ಥ ನಾರಾಯಣ, ಸಚಿವರಾದ ವಿ. ಸೋಮಣ್ಣ, ರಮೇಶ್ ಜಾರಕಿಹೊಳಿ, ಆನಂದ್‌ಸಿಂಗ್, ಬಸವರಾಜ್ ಬೊಮ್ಮಾಯಿ, ಮುಖ್ಯ ಸಚೇತಕ ವಿ.ಸುನೀಲ್ ಕುಮಾರ್, ಹಾಗೂ ಇತರೆ ಸಚಿವರು, ಶಾಸಕರು ಇದನ್ನು ಕೇಳಿಸಿಕೊಂಡು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಉಲ್ಲೇಖಿಸಿದ್ದಾರೆ.



**ಇದು ನನ್ನೊಬ್ಬನ ಹಕ್ಕುಚ್ಯುತಿ ಅಲ್ಲ, ಇಡೀ ಸದನದ ಗೌರವದ ಪ್ರಶ್ನೆ. ಇಷ್ಟು ಹಿರಿಯರಾಗಿ ನೀವೇ (ಸಿದ್ದರಾಮಯ್ಯ ) ಇದನ್ನು ಸ್ವಾಗತಿಸಿದರೆ ತಪ್ಪು ಸಂದೇಶ ಹೋಗುತ್ತದೆ.**

**-ಡಾ.ಕೆ.ಸುಧಾಕರ್** ವೈದ್ಯ ಶಿಕ್ಷಣ ಸಚಿವ.



**ಪ್ರಜಾಪ್ರಭುತ್ವಕ್ಕೆ ಬೆಂಕಿ ಹಾಕುತ್ತಿದ್ದಾರೆ. ಸ್ಪೀಕರ್ ಪೀಠಕ್ಕೂ ಗೌರವ ಇಲ್ಲವೇ? ನಾನು ಮಂಗಳವಾರವೇ ಹಕ್ಕುಚ್ಯುತಿ ನೋಟಿಸ್ ನೀಡಿದ್ದೇನೆ.**

**-ಸಿದ್ದರಾಮಯ್ಯ** ಪ್ರತಿಪಕ್ಷ ನಾಯಕ

## ಪೇಚಿಗೆ ಸಿಲುಕಿದ ಸ್ಪೀಕರ್

ಎರಡು ಹಕ್ಕುಚ್ಯುತಿ ನಿರ್ಣಯ ಹಾಗೂ 363ರ ಅನ್ವಯ ಬಿಜೆಪಿ ನೀಡಿರುವ ನೋಟಿಸ್ ಮಧ್ಯೆ ಯಾವುದಕ್ಕೆ ಮೊದಲು ಆದ್ಯತೆ ನೀಡಬೇಕೆಂಬ ವಿಚಾರದಲ್ಲಿ ಸ್ಪೀಕರ್ ಕಾಗೇರಿ ಈಗ ಪೇಚಿಗೆ ಸಿಲುಕಿದ್ದಾರೆ.



ಭೋಜನ ವಿರಾಮದ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ಎರಡು ಹಕ್ಕುಚ್ಯುತಿ ನೋಟಿಸ್ ಬಂದಿವೆ. ಈ ಹಿನ್ನೆಲೆಯಲ್ಲಿ ಪ್ರಶ್ನೋತ್ತರ ಕಲಾಪ ಬದಿಗಿಟ್ಟು ಈ ಚರ್ಚೆ ಆರಂಭಿಸೋಣ ಎಂದು ಸಿದ್ದರಾಮಯ್ಯಗೆ ಅವಕಾಶ ನೀಡಿದರು. ಆದರೆ ಇದನ್ನು ಆಕ್ಷೇಪಿಸಿದ ಸಚಿವ ಸುಧಾಕರ್, 'ನನ್ನ ವಾಕ್ ಸ್ವಾತಂತ್ರ್ಯ ಕಿತ್ತುಕೊಂಡು ರಮೇಶ್ ಕುಮಾರ್ ದೌರ್ಜನ್ಯ ಎಸಗಿದ್ದಾರೆ. ಹೀಗಾಗಿ ನನಗೆ ಮೊದಲು ಮಾತನಾಡಲು ಬಿಡಿ. ಆ ಮೇಲೆ ಸಿದ್ದರಾಮಯ್ಯ ಮಾತನಾಡಲಿ. ನಾನು ಹಕ್ಕು ಚ್ಯುತಿ ಎದುರಿಸಲು ಸಿದ್ಧ,' ಎಂದರು.

ಆದರೆ ಕಾಂಗ್ರೆಸ್ ಸದಸ್ಯರು ವಿರೋಧಿಸಿದಾಗ, ಸಚಿವರಾದ ಬೈರತಿ ಬಸವರಾಜ್, ಗೋಪಾಲಯ್ಯ, ರಮೇಶ್ ಜಾರಕಿಹೊಳಿ, ಆನಂದ್ ಸಿಂಗ್, ಸಿ.ಸಿ.ಪಾಟೀಲ್, ಬಿ.ಸಿ.ಪಾಟೀಲ್, ಎಸ್.ಟಿ.ಸೋಮಶೇಖರ್, ನಾರಾಯಣಗೌಡ ತಿರುಗಿ ಬಿದ್ದರು. ಆಗ ಸಿದ್ದರಾಮಯ್ಯ, ನೀವೇನು ಮಂತ್ರಿಗಳಾ? ಎದುರು ಸಾಲಲ್ಲಿ ಕುಳಿತು ಈ ರೀತಿ ಮಾತನಾಡುತ್ತಾರಾ? ನಿಮಗೂ ಅವರು ಗೌರವ ನೀಡುತ್ತಿಲ್ಲ' ಎಂದರು. 2 ಪಕ್ಷದ ಮಧ್ಯೆ ವಾಗ್ವಾದ ಮುಂದುವರಿದಾಗ ಅನಿವಾರ್ಯವಾಗಿ ಅರ್ಧಗಂಟೆ ಕಾಲ ಕಲಾಪ ಮುಂದೂಡಲಾಯಿತು. ವಿವಾದ ಬಗೆ ಹರಿಯದ ಹಿನ್ನೆಲೆಯಲ್ಲಿ ಕಲಾಪವನ್ನು ಗುರುವಾರ ಬೆಳಗ್ಗೆ 11 ಗಂಟೆಗೆ ಮುಂದೂಡಲಾಗಿದೆ.